**ಸಲಹೆ** ಮಣ್ಣಿನ ಪೋಷಕಾಂಶ ಮಟ್ಟ ತಿಳಿದು ಕ್ರಮ ವಹಿಸಲು ಅನುಕೂಲ: ಬೆಂ.ಕೃಷಿ ವಿವಿಯಲ್ಲಿ ತರಬೇತಿ

# 3 ವರ್ಷಕ್ಕೊಮ್ಮೆ ಮಣ್ಣು ಪರೀಕ್ಷೆ ಮಾಡಿಸಿ: ಪ್ರಕಾಶ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೈತರು ತಪ್ಪದೇ ಪ್ರತಿ 3 ವರ್ಷಕ್ಕೊಮ್ಮೆ ಜಮೀನಿನ ಮಣ್ಣು ಪರೀಕ್ಷೆ ಮಾಡಿಸಬೇಕು. ಇದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳ ಮಟ್ಟ ತಿಳಿಯಲಿದ್ದು, ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ವಿಭಾಗದ ಮುಖ್ಯಸ್ಥ ಡಾ। ಎನ್.ಬಿ.ಪ್ರಕಾಶ್ ಸಲಹೆ ನೀಡಿದರು.

ಕೋರಮಂಡಲ್ ಇಂಟರ್‌ನ್ಯಾಷನಲ್ ಕಂಪನಿಯ ಸಹಯೋಗದಲ್ಲಿ ವಿವಿಯು ಹೆಬ್ಬಾಳದ ಜಿಕೆವಿಕೆಯಲ್ಲಿ ಸೋಮವಾರ ಆಯೋಜಿಸಿದ್ದ 'ಮುಂಗಾರು ಹಂಗಾಮಿನಲ್ಲಿ ಪ್ರಮುಖ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ತರಬೇತಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ರೈತರು ರಾಸಾಯನಿಕ ರಸಗೊಬ್ಬರಗಳಿಗೆ ಆದ್ಯತೆ ನೀಡುತ್ತಿರು ವುದರಿಂದ ಮಣ್ಣಿನಲ್ಲಿರುವ ಸಾವಯವ ಅಂಶ ಕಡಿಮೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್.ಮಧುಪ್ರಸಾದ್ ಮಾತನಾಡಿ, ಈ ವರ್ಷ ಉತ್ತಮ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು ಸೂಕ್ತವಾದ ಬೆಳೆಗಳ ಬಗ್ಗೆ ರೈತರಿಗೆ ಸಕಾಲದಲ್ಲಿ ಮಾಹಿತಿ ನೀಡುವುದು ಕೃಷಿ ವಿವಿಗಳು, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಖಾಸಗಿ ಕಂಪನಿಗಳ ಜವಾಬ್ದಾರಿಯಾಗಿದೆ ಎಂದರು. ತರಬೇತಿ ಸಂಯೋಜಕ ಡಾ। ಕೆ.ಶಿವರಾಮು, ಕೋರಮಂಡಲ್ ಇಂಟರ್‌ನ್ಯಾಷನಲ್ ಕಂಪನಿಯ ವಿಭಾಗೀಯ ಬೇಸಾಯ ತಜ್ಞ ಎಚ್.ವಿ.ರಮೇಶ್ ಕುಮಾರ್ ಇದ್ದರು.



ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ಮುಂಗಾರು ಹಂಗಾಮಿನಲ್ಲಿ ಪ್ರಮುಖ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ತರಬೇತಿ ಕಾರ್ಯಕ್ರಮ'ವನ್ನು ಬೆಂಗಳೂರು ಕೃಷಿ ವಿವಿಯ ಕೃಷಿ ವಿಭಾಗದ ಮುಖ್ಯಸ್ಥ ಡಾ। ಎನ್.ಬಿ.ಪ್ರಕಾಶ್ ಉದ್ಘಾಟಿಸಿದರು. ಡಾ। ವಿ.ಎಲ್.ಮಧುಪ್ರಸಾದ್ ಹಾಜರಿದ್ದರು.

**02-07-2024**
**Kannadaprabha Pg 04**

ఈనాడు
మంగళవారం జులై 2, 2024



సదస్సును ప్రారంభిస్తున్న ప్రకాశ్, మధుప్రసాద్, శివరాం తదితరులు

## సాగుకు మట్టి పరీక్ష ప్రధానం

**బెంగళూరు (యశ్వంతపుర), న్యూస్‌టుడే :** వ్యవసాయ సాగుకు ముందు మట్టి పరీక్ష ప్రధానమని, రైతులు మూడేళ్లకు ఒకసారి మట్టిపరీక్ష చేసి పంటలు సాగుచేయాలని బెంగళూరు వ్యవసాయ విశ్వవిద్యాలయం డీన్ డాక్టర్ ఎన్.బి.ప్రకాశ్ సూచించారు. సోమవారం ఇక్కడ జీకేవీకే ఆవరణలో ముంగారు వ్యవసాయంపై ఏర్పాటు చేసిన సదస్సును ఆయన ప్రారంభించి మాట్లాడారు. ఇటీవల యువ రైతులు ఎక్కువ దిగుబడి కోసం రసాయనిక ఎరువులు వినియోగించడం వల్ల భూసారం తక్కువవుతుందని ఆందోళన వ్యక్తం చేశారు. మట్టిసారం తక్కువైతే ఆప్రభావం మనిషి ఆరోగ్యంపై చూపుతుందని హెచ్చరించారు. రసాయనిక ఎరువుల వినియోగం తగ్గించాల్సిన అవసరం ఉందన్నారు. కార్యక్రమంలో విస్తరణ అధికారి డాక్టర్ వి.ఎల్.మధుప్రసాద్, శిక్షణాధికారి డాక్టర్ కె.శివరాం, సేంద్రియ నిపుణుడు హెచ్.వి.రమేష్ కుమార్ తదితరులు పాల్గొన్నారు.

# ಮಣ್ಣು ಪರೀಕ್ಷಿಸಿ, ಫಲವತ್ತತೆ ಹೆಚ್ಚಿಸಿ

**ಬೆಂಗಳೂರು :** ರೈತರು ತಮ್ಮ ಜಮೀನಿನ ಮಣ್ಣು ಪರೀಕ್ಷೆಯನ್ನು ತಪ್ಪದೇ ಮೂರು ವರ್ಷಗಳಿಗೊಮ್ಮೆ ಮಾಡಿಸಿಕೊಳ್ಳಲು ಮುಂದಾಗಬೇಕು, ಇದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳ ಮಟ್ಟ ತಿಳಿಯುತ್ತದೆ ಎಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಡೀನ್ ಡಾ.ಎನ್.ಬಿ.ಪ್ರಕಾಶ್ ತಿಳಿಸಿದರು.ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕೋರಮಂಡಲ್ ಇಂಟರ್‌ನ್ಯಾಷನಲ್ ಲಿ.ಬೆಂಗಳೂರು ಇರವ ಸಹಯೋಗದೊಂದಿ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ, ಮುಂಗಾರು ಹಂಗಾಮಿನಲ್ಲಿ ಪ್ರಮುಖ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನದಲ್ಲಿ ರೈತರು ರಾಸಾಯನಿಕ ರಸಗೊಬ್ಬರಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಮಣ್ಣಿನಲ್ಲಿರುವ ಸಾವಯವ ಅಂಶವು ಕುಂಠಿತಗೊಳ್ಳುತ್ತಿದೆ. ಮಣ್ಣು ಹಾಗೂ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದೆ. ರಸಗೊಬ್ಬರಗಳ ಜತೆಗೆ ಸಾವಯವ ಗೊಬ್ಬರಗಳನ್ನೂ ಸಹ ಬಳಸಿ ಸಮಗ್ರ ಪೋಷಕಾಂಶ ನಿರ್ವಹಣೆ ಕೈಗೊಳ್ಳಬೇಕು ಎಂದು ತಿಳಿಸಿದರು.

**ಅರಿವು ಮೂಡಿಸುವು ಅತ್ಯಗತ್ಯ:** ಇತ್ತೀಚಿನ ಸಂಶೋಧನೆಯಾದ ನ್ಯಾನೋ ಯೂರಿಯಾ ಮತ್ತು ಡಿಎಪಿ ರಸಗೊಬ್ಬರಗಳನ್ನು ರೈತರು ಬಳಸಿದರೆ ಖರ್ಚನ್ನು ಕಡಿತಗೊಳಿಸಬಹುದು. ಆದರೆ, ಯಾವ ಪ್ರಮಾಣದಲ್ಲಿ ಯಾವಾಗ ಬಳಸಬೇಕು ಎನ್ನುವುದರ ಬಗ್ಗೆ ಹೆಚ್ಚಿನ ಸಂಶೋಧನೆ ಮತ್ತು ಈ ಕುರಿತು ರೈತರಲ್ಲಿ ಅರಿವು ಮೂಡಿಸುವುದು ಅವಶ್ಯಕವೆಂದು ಅಭಿಪ್ರಾಯ ಪಟ್ಟರು.

ಜಿಕೆವಿಕೆ ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್ ಮಾತನಾಡಿ, ಮುಂಗಾರು ಮಳೆ ಪ್ರಾರಂಭವಾಗಿದೆ. ಈ ವರ್ಷ ಉತ್ತಮ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆಯವರು ತಿಳಿಸಿರುವ ಹನ್ನೆಲೆಯಲ್ಲಿ ಈ ಮುಂಗಾರಿಗೆ ಸೂಕ್ತವಾದಂತಹ ಬೆಳೆಗಳ ಬಗ್ಗೆ ರೈತರಿಗೆ ಸಕಾಲದಲ್ಲಿ ಮಾಹಿತಿ ನೀಡುವುದು ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಮತ್ತು ಖಾಸಗಿ ಕಂಪನಿಗಳ ಜವಾಬ್ದಾರಿಯಾಗಿರುತ್ತದೆ ಎಂದರು.

ಮುಂಗಾರಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾದ ಭತ್ತ, ಮುಸುಕಿನಜೋಳ, ಹತ್ತಿ, ಮೆಣಸಿನಕಾಯಿ, ಕಬ್ಬು ಮತ್ತು ದ್ವಿದಳಧಾನ್ಯ ಬೆಳೆಗಳ ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ಸಂಬಂಧಪಟ್ಟ ವಿಜ್ಞಾನಿಗಳಿಂದ ಮಾಹಿತಿ ನೀಡಲು ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವುದು ಸಂತಸದ ವಿಷಯ ಎಂದರು.

**02-07-2024**
**Hosadiganta Pg 07**

# ರೈತರು ಮೂರು ವರ್ಷಗಳಿಗೊಮ್ಮೆ ಜಮೀನಿನ ಮಣ್ಣು ಪರೀಕ್ಷೆ ಮಾಡಿಸಿ: ಡಾ.ಪ್ರಕಾಶ್

ಬೆಂಗಳೂರು, ಜು.1: ರೈತರು ತಮ್ಮ ಜಮೀನಿನ ಮಣ್ಣು ಪರೀಕ್ಷೆಯನ್ನು ತಪ್ಪದೇ ಮೂರು ವರ್ಷಗಳಿಗೊಮ್ಮೆ ಮಾಡಿಸಿಕೊಳ್ಳಲು ಮುಂದಾಗಬೇಕು. ಇದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳ ಮಟ್ಟ ತಿಳಿಯುತ್ತದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡೀನ್ ಡಾ.ಎನ್.ಬಿ.ಪ್ರಕಾಶ್ ತಿಳಿಸಿದ್ದಾರೆ.

ಸೋಮವಾರ ಜಿಕೆವಿಕೆ ಆವರಣದಲ್ಲಿ ಕೋರಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್ ವತಿಯಿಂದ ಆಯೋಜಿಸಿದ್ದ 'ಮುಂಗಾರು ಹಂಗಾಮಿನಲ್ಲಿ ಪ್ರಮುಖ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ತರಬೇತಿ ಕಾರ್ಯಕ್ರಮ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ರೈತರು ರಾಸಾಯನಿಕ ಗೊಬ್ಬರಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಮಣ್ಣಿನಲ್ಲಿರುವ ಸಾವಯವ ಅಂಶವು ಕುಂಠಿತಗೊಳ್ಳುತ್ತಿದ್ದು, ಮಣ್ಣು ಹಾಗೂ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದೆ. ರಸಗೊಬ್ಬರಗಳ ಜೊತೆಗೆ ಸಾವಯವ ಗೊಬ್ಬರಗಳನ್ನೂ ಬಳಸಿ ಸಮಗ್ರ ಪೋಷಕಾಂಶ ನಿರ್ವಹಣೆ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಕೃಷಿ ವಿವಿಯ ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ತರಬೇತಿ ಸಂಯೋಜಕ ಡಾ.ಕೆ. ಶಿವರಾಮು, ಬೇಸಾಯತಜ್ಞ ಎಚ್.ವಿ. ರಮೇಶ್ ಕುಮಾರ್, ಕೋರಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ವಿಸ್ತರಣಾ ಕಾರ್ಯಕರ್ತರು ಸೇರಿದಂತೆ ಮತ್ತಿತರರಿದ್ದರು.

**02-07-2024**
**Varthabharati Pg 03**

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಗೋಮೂತ್ರದ ಅಪರಿಮಿತ ಉಪಯೋಗ



ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಗೋಮೂತ್ರವು ಪುರಾತನ ಕಾಲದಿಂದಲೂ ಔಷಧಿಯಾಗಿ ಬಳಕೆಯಾಗುತ್ತಿದ್ದ ಒಂದು ಗೋಜನ್ಯ ಪದಾರ್ಥವಾಗಿದೆ. ಆಯುರ್ವೇದ ಶಾಸ್ತ್ರಗಳಲ್ಲಿ ವಿಸ್ತೃತವಾಗಿ ಈ ಬಗ್ಗೆ ವಿವರಣೆಗಳಿವೆ. ಆಯುರ್ವೇದದ ಮೂರು ಗ್ರಂಥಗಳಾದ ಚರಕ ಸಂಹಿತೆ, ಸುಶ್ರುತ ಸಂಹಿತೆ ಮತ್ತು ವಾಗ್ಬಟರ ಬರಹಗಳಲ್ಲಿ ಗೋಮೂತ್ರ ಚಿಕಿತ್ಸೆಯ ವಿವರಣೆ ದೊರೆಯುತ್ತದೆ. ಇದರೊಂದಿಗೆ ಆಯುರ್ವೇದದಲ್ಲಿ ಗೋಮೂತ್ರವನ್ನು ಯಾವ ಗೋವಿನಿಂದ ಪಡೆಯಬೇಕು ಮತ್ತು ಹೇಗೆ ಪಡೆಯಬೇಕು ಎಂಬುದರ ಬಗ್ಗೆ ಸ್ಪಷ್ಟ ವಿವರಣೆ ಇರುವುದು ಕಂಡುಬರುತ್ತದೆ. ಹಾಗೆಯೇ ಯಾವುದೇ ಒಂದು ರೋಗ ಪೀಡಿತ ಗೋವಿನ ಮೂತ್ರವನ್ನು ಔಷಧಿಯನ್ನಾಗಿ ಬಳಸಬಾರದು ಎಂಬುದಾಗಿ ಎಚ್ಚರಿಸಿರುವುದು ಗೋಚರಿಸುತ್ತದೆ. ಆದರೆ ಆಧುನಿಕ ವಿಜ್ಞಾನ ಇತ್ತೀಚೆಗಷ್ಟೇ ಗೋಮೂತ್ರದಲ್ಲಿನ ಔಷಧೀಯ ಮೌಲ್ಯಗಳನ್ನು ಗುರುತಿಸುವ ನಿಟ್ಟಿನಲ್ಲಿ ಕಾರ್ಯಪ್ರವರ್ತವಾಗಿದೆ. ವಿಶೇಷವೆಂದರೆ ನಡೆದ ಕೆಲವೇ ಸಂಶೋಧನೆಗಳು ಗೋವಿನ ಉತ್ಪನ್ನಗಳಲ್ಲಿನ ಶ್ರೇಷ್ಠತೆಯನ್ನು ಜಗಜ್ಜಾಹೀರುಗೊಳಿಸಿವೆ. ಪ್ರಮುಖವಾಗಿ ಗೋಮೂತ್ರದ ಸೇವನೆಯಿಂದ ದೇಹದ ರೋಗ ನಿರೋಧಕ ಶಕ್ತಿ ಅಧಿಕವಾಗುವುದು ಸ್ಪಷ್ಟವಾಗಿದೆ.

ರಕ್ತದಲ್ಲಿ ದೇಹದ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವಂತಹ ಜೀವಕೋಶಗಳನ್ನು ಮ್ಯಾಕ್ರೋಫೇಸಸ್ ಎಂಬುದಾಗಿ ಗುರುತಿಸಲಾಗುತ್ತದೆ. ಈ ಜೀವಕೋಶಗಳು ದೇಹದಲ್ಲಿ ಸೈನಿಕರಂತೆ ಕೆಲಸವನ್ನು ಮಾಡುತ್ತವೆ. ದೇಹದೊಳಗೆ ಯಾವುದೇ ರೀತಿಯ ಕೀಟಾಣುಗಳು ಪ್ರವೇಶಿಸಿದಾಗ ತಕ್ಷಣ ಎಚ್ಚೆತ್ತುಕೊಳ್ಳುವ ಈ ಜೀವಕೋಶಗಳು ಆ ಕೀಟಾಣುಗಳ ಮೇಲೆ ಯುದ್ಧವನ್ನು ಸಾರಿ ಅವುಗಳನ್ನು ಕೊಲ್ಲುತ್ತವೆ ಇಲ್ಲವೇ ಇನ್ನಿಲ್ಲವಾಗಿಸುತ್ತವೆ. ಈ ಯುದ್ಧದಲ್ಲಿ ಕೀಟಾಣುಗಳಸಂಖ್ಯೆ ಅಧಿಕವಾಗಿದ್ದರೆಕೀಟಾಣುಗಳುಗೆದ್ದು ದೇಹಸೋಲುತ್ತದೆ. ಹೀಗಾಗಿ ರಕ್ತವು ಹೆಚ್ಚು ಹೆಚ್ಚು ಮ್ಯಾಕ್ರೋಫೇಸಸ್‌ಗಳನ್ನು ಉತ್ಪಾದಿಸುತ್ತದೆ. ಇಲ್ಲವಾದಲ್ಲಿ ರೋಗ ವಿಜೃಂಭಿಸುತ್ತದೆ. ಇಂತಹ ಬೆಲೆಕಟ್ಟಲಾಗದ ಮ್ಯಾಕ್ರೋಫೇಸಸ್‌ಗಳ ಸಂಖ್ಯೆ ದೇಶಿ ಗೋಮೂತ್ರದ ಸೇವನೆಯಿಂದ ಶೇಕಡಾ 104ರಷ್ಟು ಅಧಿಕವಾಗುವುದು ಸಂಶೋಧನೆಯಿಂದ ದೃಢಪಟ್ಟಿದೆ. ಇದರಂತೆ ಇತರೆ ಪ್ರಾಣಿಗಳ ಮೂತ್ರದಿಂದಲೂ ಈ ಮ್ಯಾಕ್ರೋಫೇಸಸ್‌ಗಳ ಸಂಖ್ಯೆ ವೃದ್ಧಿಸುತ್ತವೆಯೇ ಎಂಬುದರ ಕುರಿತು ಸಂಶೋಧನೆ ನಡೆಸಿದಾಗ, ವಿದೇಶಿ ಗೋವಿನ ಮೂತ್ರವು ಶೇಕಡಾ 12ರಷ್ಟು ಮಾತ್ರ ಮ್ಯಾಕ್ರೋಫೇಸಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿದರೆ, ಎಮ್ಮೆಯ ಮೂತ್ರವು ಶೇಕಡಾ 18ರಷ್ಟು ಮತ್ತು ಆಡಿನ ಮೂತ್ರವು ಶೇಕಡಾ 40ರಷ್ಟು ಮ್ಯಾಕ್ರೋಫೇಸಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿದ್ದು ಕಂಡುಬಂದಿದೆ. ಇದರಿಂದ ಯಾವುದೇ ಪ್ರಾಣಿಯ ಮೂತ್ರವು ಗೋಮೂತ್ರದಷ್ಟು ಪರಿಣಾಮಕಾರಿಯಾಗಿಲ್ಲ ಎಂಬುದು ಮತ್ತೊಮ್ಮೆ ದೃಢಪಟ್ಟಿದೆ.

ಗೋಮೂತ್ರದ ಸೇವನೆಯನ್ನು ಪ್ರತಿನಿತ್ಯ ಮಾಡಿದಲ್ಲಿ ದೇಹದ ರೋಗ ನಿರೋಧಕ ಶಕ್ತಿ ಅಧಿಕವಾಗಿ ಎಂತಹ ರೋಗವನ್ನೂ ಹಿಮ್ಮೆಟ್ಟಿಸುವ ಶಕ್ತಿ ಬರುವುದು ದೃಢಪಟ್ಟಿದೆ. ಗೋಮೂತ್ರವನ್ನು ಸಂಗ್ರಹಿಸಿ ಸೋಸಿ ನಂತರ ಪ್ರತಿನಿತ್ಯ ಒಂದೆರಡು ಚಮಚ ಅಥವಾ 20 ರಿಂದ 25 ಗ್ರಾಂಗಳಷ್ಟು ತಾಜಾ ಸೇವಿಸಿದರೆ ಎಷ್ಟೋ ರೋಗಗಳು ಬಾರದಂತೆ ತಡೆಯುವ ಸಾಮರ್ಥ್ಯ ಶರೀರದಲ್ಲಿ ನಿರ್ಮಾಣವಾಗುವುದರೊಂದಿಗೆ ಶರೀರದಲ್ಲಿರುವ ವಿಷಯುಕ್ತ ಪದಾರ್ಥಗಳನ್ನು ಹೊರಹಾಕುವಲ್ಲಿ ಸಹಕಾರಿಯಾಗಿರುವುದು ಸಂಶೋಧನೆಗಳಿಂದ ದೃಢಪಟ್ಟಿದೆ. ಬೆಳಗಿನ ಕೆಲಸಗಳನ್ನು ಮುಗಿಸಿ ಖಾಲಿ ಹೊಟ್ಟೆಗೆ ಅವಶ್ಯಕ್ಕೆ ತಕ್ಕಂತೆ ತಾಜಾ ಗೋಮೂತ್ರ ಸೇವಿಸಿ, ಕಾಲು ಅಥವಾ ಅರ್ಧ ಗಂಟೆ ಏನನ್ನೂ ತಿನ್ನದೆ, ಕುಡಿಯದೆ ಇರುವುದು ಎಲ್ಲಾ ರೀತಿಯ ಆರೋಗ್ಯದ ಸಮಸ್ಯೆಗಳಿಗೆ ಉತ್ತಮ ಪರಿಹಾರ ಎಂದೇ ಹೇಳಲಾಗಿದೆ. ಕನಿಷ್ಟ ಎಂಟು ಗಂಟೆ ಬಿಸಿಲಿನಲ್ಲಿ ಮೇದು ಬರುವ ದೇಶಿ ಗೋವಿನ ಮೂತ್ರದಲ್ಲಿ ಔಷಧೀಯ ಗುಣಗಳು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಬ್ರಾಹ್ಮಿ ಮುಹೂರ್ತದಲ್ಲಿ ಹಿಡಿದ ಗೋಮೂತ್ರವು ಅತ್ಯಂತ ಶ್ರೇಷ್ಠ ಔಷಧಿ ಗುಣಗಳನ್ನು ಹೊಂದಿರುತ್ತದೆ ಎನ್ನಲಾಗಿದೆ. ತಾಜಾ ಗೋಮೂತ್ರವನ್ನು ಭಟ್ಟಿ ಇಳಿಸಿ ಅರ್ಕ ಮಾಡಿಯೂ ಬಳಸಬಹುದಾಗಿದ್ದು, ಹೀಗೆ ಬಟ್ಟಿ ಇಳಿಸಿ ಅರ್ಕವನ್ನಾಗಿ ಶೇಖರಿಸಿ ನಿತ್ಯ ಸೇವನೆ ಮಾಡಿದ್ದಲ್ಲಿ ದೇಹದ ವಾತ, ಪಿತ್ತ ಹಾಗೂ ಕಫಾ ಸಮತೋಲನದಲ್ಲಿರುತ್ತದೆ. ಹೀಗಾಗಿಯೇ ಸಂಧಿ ವಾತ, ಬಿಳಿ ರಕ್ತಕಣಗಳ ಕಾರ್ಯ, ಯಕೃತ್ತಿನ ಜೀವಕೋಶಗಳ ಮೇಲೆ ಕಾರ್ಬನ್ ಟೆಟ್ರಾಕ್ಲೋರೈಡ್‌ನ ಪರಿಣಾಮ ಇತ್ಯಾದಿಗಳಲ್ಲಿ ಗೋಅರ್ಕದ ಪ್ರಯೋಜನಗಳ ಕುರಿತಂತೆ ಸಾಕಷ್ಟು ಪ್ರಯೋಗಗಳು ನಡೆದಿವೆ. ಎಲ್ಲದಕ್ಕಿಂತ ತಾಜಾ ರೂಪದಲ್ಲಿ ಗೋಮೂತ್ರವನ್ನು ಸೇವನೆ ಮಾಡುವುದೇ ಅತಿ ಹೆಚ್ಚು ಪರಿಣಾಮಕಾರಿಯಾದುದು ಎನ್ನಲಾಗಿದೆ. ಇನ್ನು ಗೋಮೂತ್ರದಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದರೊಂದಿಗೆ ದೇಹದಲ್ಲಿ ಔಷಧಿ ಉತ್ಪಾದಿಸುವ ಪ್ರಕ್ರಿಯೆಯು ಹೆಚ್ಚಾಗಿ ನಾವು ನಿರೋಗಿಯಾಗಿ ಇರಬಹುದು ಎಂಬುದಾಗಿ ವಾಗ್ಬಟ ಮಹರ್ಷಿಗಳು ಸ್ಪಷ್ಟಪಡಿಸಿದ್ದಾರೆ.

ಆಧುನಿಕ ಯುಗದಲ್ಲಿ ಮಾನವನನ್ನು ಕಾಡುವ ಬಹುತೇಕ ಕಾಯಿಲೆಗಳಿಗೆ ಗೋಮೂತ್ರವು ಔಷಧವಾಗಿದ್ದು, ತೀಕ್ಷ್ಣ, ಉಷ್ಣ ಮತ್ತು ಪಾಚಕ ಗುಣವನ್ನು ಹೊಂದಿರುವುದು ದೃಢಪಟ್ಟಿದೆ. ಇದರಲ್ಲಿ ಆಂಟಿವೈರಲ್, ಆಂಟಿಸೆಪ್ಟಿಕ್, ಆಂಟಿಫಂಗಲ್ ಮತ್ತು ಆಂಟಿ ಕ್ಯಾನ್ಸರ್‌ನ ಗುಣವಿದ್ದು ಜಠರಾಗ್ನಿಯನ್ನು ಹೆಚ್ಚಿಸುವುದರೊಂದಿಗೆ ಪಿತ್ತಕಾರಕ ಮತ್ತು ಮೇಧಾಶಕ್ತಿ ವರ್ಧಕವಾಗಿರುವುದನ್ನು ಸಂಶೋಧನೆಗಳು ದೃಢಪಡಿಸಿವೆ. ಹಾಗೆಯೇ ಇದು ದೇಹದಲ್ಲಿನ ರಕ್ತ ಶುದ್ಧಿ ಮಾಡುವುದರೊಂದಿಗೆ ಹೊಟ್ಟೆಗೆ ಸಂಬಂಧಿಸಿದ ಎಲ್ಲಾ ರೋಗಗಳನ್ನು ನಿವಾರಿಸುತ್ತದೆ. ಯಕೃತ್‌ಗೆ ಸಂಬಂಧಿಸಿದ ಎಲ್ಲಾ ರೋಗಗಳಿಗೆ ಇದು ರಾಮಬಾಣವಾಗಿದೆ. ಕಫರೋಗ, ಪಾಂಡುರೋಗ, ಕಿವಿ ಸೋರುವಿಕೆ, ಪ್ರಸೂತಿ ರೋಗ, ಅಜೀರ್ಣ, ಜ್ವರ, ಮೂತ್ರಕೃಚ್ಛ ಹಾಗೂ ಕಣ್ಣು ರೋಗಗಳಿಗೆ ಗೋಮೂತ್ರದ ಚಿಕಿತ್ಸೆಯು ಅತಿ ಲಾಭದಾಯಕವಾಗಿದೆ. ವಿಚಿತ್ರವೆಂದರೆ ಇದರ ಸೇವನೆಯಿಂದ ಲೇಖನ ಶಕ್ತಿ ಮತ್ತು ಬುದ್ಧಿಶಕ್ತಿ ಬೆಳೆಯುವುದು ರುಜುವಾತಾಗಿದೆ. ಗೋಮೂತ್ರದೊಂದಿಗೆ ವ್ಯಕ್ತಿಯ ದೇಹ ಪ್ರಕೃತಿಗೆ ಅನುಗುಣವಾಗಿ ತುಳಸಿ, ಅಮೃತಬಳ್ಳಿ, ಭದ್ರಮುಷ್ಟಿ, ಬೃಂಗರಾಜ, ಹಿಪ್ಪಲಿ ಇತ್ಯಾದಿಗಳನ್ನು ಮಿಶ್ರಣ ಮಾಡಿ ತಯಾರಿಸಿದ ಔಷಧಿ ಅತ್ಯಂತ ಪರಿಣಾಮಕಾರಿಯಾದುದು ಎಂದೇ ಹೇಳಲಾಗಿದೆ. ಹಾಗೆಯೇ ಕಪ್ಪು ಗೋವಿನ ಮೂತ್ರಕ್ಕೆ ನಾಲ್ಕು ಬಗೆಯ ದಾಸವಾಳ ಮಿಶ್ರಣ ಮಾಡಿ, ತಲೆಗೆ ಹಚ್ಚಿ 2 ಗಂಟೆ ಬಿಟ್ಟು ಸ್ನಾನ ಮಾಡಿದರೆ, ಕೂದಲು ದಪ್ಪನಾಗುವುದರೊಂದಿಗೆ ತಲೆಯ ಹೊಟ್ಟು ನಿವಾರಣೆಯಾಗುತ್ತದೆ ಎಂದು ಹೇಳಲಾಗಿದೆ.

ಗೋಮೂತ್ರದಲ್ಲಿ 100ಕ್ಕೂ ಹೆಚ್ಚು ಔಷಧೀಯ ಗುಣವಿದ್ದು, ಸೋಡಿಯಂ ಮತ್ತು ವಿಟಮಿನ್ ಎ, ಬಿ, ಸಿ ಹಾಗೂ ಡಿ ಇರುವುದು ಪತ್ತೆಯಾಗಿದೆ. ಇದರಲ್ಲಿ ಸ್ವರ್ಣಾಚ್ಛಾರವಿದ್ದು, ಮನುಷ್ಯನ ದೇಹದಲ್ಲಿನ ರೋಗನಿರೋಧಕ ಗುಣವನ್ನು ಹೆಚ್ಚಿಸುತ್ತದೆ. ಅಮೆರಿಕದ ವೈಜ್ಞಾನಿಕರು ಇಲ್ಲಿಯವರೆಗೂ ಗೋಮೂತ್ರದಲ್ಲಿ 60 ಗುಣಗಳನ್ನು ಪತ್ತೆಹಚ್ಚಿದ್ದರೆ, ನಮ್ಮಲ್ಲಿ 25 ಗುಣಗಳನ್ನು ಸಂಶೋಧಿಸಲಾಗಿದೆ. ಹಾಗೆಯೇ ದೇಶಿ ಗೋವಿನ ಬೆನ್ನಿನ ಮೇಲಿರುವ ಡುಬ್ಬವು ಆಂಟೇನಾ ರೀತಿ ಕೆಲಸ ಮಾಡುವ ಮೂಲಕ ಸೂರ್ಯ ಮತ್ತು ಚಂದ್ರನ ಕಿರಣಗಳನ್ನು ಸೆಳೆದುಕೊಳ್ಳುತ್ತದೆ ಎನ್ನಲಾಗಿದ್ದು, ಇದರಿಂದಲೇ ಗೋಮೂತ್ರದ ಚಿಕಿತ್ಸೆ ಕೀಮೋಥೆರಪಿಯಷ್ಟೇ ಪರಿಣಾಮಕಾರಿಯಾದುದು ಎನ್ನಲಾಗಿದೆ. ವಿಪರ್ಯಾಸವೆಂದರೆ ದೇಶದಲ್ಲಿರುವ ಔಷಧಿ ಮಾಫಿಯಾವು ಗೋಮೂತ್ರ ಕುಡಿದರೆ ಉಷ್ಣವಾಗಲಿದೆ ಎಂಬುದಾಗಿ ಬಿಂಬಿಸುತ್ತಿದೆ. ಏಕೆಂದರೆ ಗೋಮೂತ್ರದಿಂದ ಡ್ರಗ್ ಕಂಪನಿಗಳಿಗೆ ನಷ್ಟವಾಗುತ್ತಿದ್ದು, ಬಹಳ ಯೋಜಿತ ರೂಪದಲ್ಲಿ ಗೋಮೂತ್ರದ ಬಗ್ಗೆ ಅಪಪ್ರಚಾರ ನಡೆಸಲಾಗುತ್ತಿದೆ. ಒಟ್ಟಿನಲ್ಲಿ ನೀರಿನ ಜೊತೆ ಸರಿ ಪ್ರಮಾಣದಲ್ಲಿ ನಿತ್ಯ ಗೋಮೂತ್ರವನ್ನು ಸೇವಿಸಿದ್ದೇ ಆದಲ್ಲಿ ಬಹುತೇಕ ರೋಗಗಳು ನಿವಾರಣೆಯಾಗುವುದಂತೂ ಸತ್ಯ. ಹೀಗಾಗಿಯೇ ಭಾರತ ಸರ್ಕಾರದ ಕೃಷಿ ಸಚಿವಾಲಯದಡಿಯಲ್ಲಿರುವ ಹೈನುಗಾರಿಕಾ ಇಲಾಖೆಯು ಗೋಮೂತ್ರವನ್ನು ಔಷಧವನ್ನಾಗಿ ಮಾರುವುದಕ್ಕೆ ಪೂರಕವಾದ ವರದಿಗಳನ್ನು ಪ್ರಕಟಿಸಿದೆ.

ಸಂಶೋಧಕರು ಹೇಳಿದಂತೆ ಗೋಮೂತ್ರದಲ್ಲಿ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಇರಬಹುದಾದ ಇಕೋಲೈ ಬ್ಯಾಕ್ಟೀರಿಯಾ ಎಂಬ ಸೂಕ್ಷ್ಮಾಣು ಜೀವಿಯಿದೆ. ಕೆಲವು ಸಂಶೋಧನೆಗಳು ಇದು ಮನುಷ್ಯನಿಗೆ ಹಲವು ರೋಗಗಳಿಗೆ ಕಾರಣವಾಗಬಹುದು ಎಂದು ಹೇಳಿವೆ. ಆದರೆ ಇದರಿಂದ ಇಲ್ಲಿಯವರೆಗೂ ಯಾವುದೇ ರೋಗ ಮನುಷ್ಯನಿಗೆ ತಗುಲಿರುವುದಕ್ಕೆ ಪುರಾವೆ ಇಲ್ಲ. ನಮ್ಮ ದೇಹದೊಳಗೆ ಬಾಯಿ, ಮೂಗು, ಕಣ್ಣು ಮತ್ತು ಕಿವಿಗಳ ಮುಖಾಂತರ ಸಾಕಷ್ಟು ಪ್ರಮಾಣದ ಸೂಕ್ಷ್ಮಾಣು ಜೀವಿಗಳು ಪ್ರತಿಕ್ಷಣ ದೇಹವನ್ನು ಪ್ರವೇಶಿಸುತ್ತಲೇ ಇರುತ್ತವೆ. ಇವೆಲ್ಲವನ್ನು ಎದುರಿಸುವ ಶಕ್ತಿ ದೇಹಕ್ಕೆ ಇದೆ. ಹಾಗೆಯೇ ಗೋಮೂತ್ರವು ಗೋವಿನ ದೇಹದಿಂದ ಹೊರಬಂದಾಗ ಅದರಲ್ಲಿ ಸಾಕಷ್ಟು ಜೀವಿಗಳು ಮತ್ತು ಹಾರ್ಮೋನ್‌ಗಳು ಇರುತ್ತವೆ. ಇವುಗಳಲ್ಲಿ ಕೆಲವೊಂದು ಹಾನಿಕಾರಕವಾದ್ದು ಎಂಬುದಾಗಿ ಕೆಲವೊಂದು ವರದಿಗಳು ಹೇಳಿವೆ. ಆದರೆ ಸಹಸ್ರಾರು ವರ್ಷಗಳ ಇತಿಹಾಸ ಇರುವ ಆಯುರ್ವೇದ ಶಾಸ್ತ್ರವು ಗೋಮೂತ್ರವು ಮನುಜನಿಗೆ ಅತ್ಯಂತ ಪ್ರಯೋಜನಕಾರಿಯಾದುದು ಎಂಬುದನ್ನು ಸಾರಿ ಹೇಳಿದೆ. ಇಂತಹ ಸಾವಿರಾರು ವರ್ಷಗಳ ಇತಿಹಾಸ ಇರುವ ಶ್ರೇಷ್ಠ ಆಯುರ್ವೇದಕ್ಕಿಂತ ಯಾವುದೋ ಸೀಮಿತ ವ್ಯಾಪ್ತಿಯ ಸಂಶೋಧನೆಯ ತುಣುಕುಗಳು ಶ್ರೇಷ್ಠವೆಂದು ಒಪ್ಪುವುದಾದರೂ ಹೇಗೆ? ಇನ್ನು ಗೋಮೂತ್ರಕ್ಕೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಿಂದಲೂ ಸಾಕಷ್ಟು ಪೇಟೆಂಟ್‌ಗಳು ದೊರೆತಿವೆ, ದೊರೆಯುತ್ತಿವೆ. ವಿದೇಶಿಯರು ಗೋಮೂತ್ರದ ಮಹತ್ವವನ್ನು ಸ್ವದೇಶಿಯರಿಗಿಂತ ಹೆಚ್ಚಾಗಿ ಗುರುತಿಸುತ್ತಿದ್ದಾರೆಂದು ಹೇಳಲು ಇದಕ್ಕಿಂತ ಉತ್ತಮ ನಿದರ್ಶನಗಳು, ಪುರಾವೆಗಳು ಬೇಕಾಗಿವೆಯೇ?

02-07-2024
Hosaadiganta Pg 06

---

ಇದರ ಬೆಲೆ ಎಸ್‌ಯುವಿ ಕಾರಿನ ರೇಟನ್ನೂ ಮೀರಿಸಿದೆ!

# 18 ಲಕ್ಷ ರೂ.ಗೆ ಮಾರಾಟವಾದ ಎತ್ತು



**ಬಬಲೇಶ್ವರ (ವಿಜಯಪುರ):** ತಾಲೂಕಿನ ಬಬಲಾದಿ ಗ್ರಾಮದಲ್ಲಿ 8 ವರ್ಷದ ಎತ್ತು 18 ಲಕ್ಷ ರೂ.ಗೆ ಮಾರಾಟವಾಗುವ ಮೂಲಕ ಹುಬ್ಬೇರಿಸುವಂತೆ ಮಾಡಿದೆ.

ಬಬಲಾದಿ ಗ್ರಾಮದ ರಾಮನಗೌಡ ಪಾಟೀಲ ಅವರಿಗೆ ಸೇರಿದ ಈ ಎತ್ತನ್ನು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಇಟ್ನಾಳ ಗ್ರಾಮದ ಸದಾಶಿವ ಡಾಂಗೆ ಅವರು ಖರೀದಿಸಿದ್ದಾರೆ. ಎತ್ತನ್ನು ಮೆರವಣಿಗೆಯಲ್ಲಿ ಬೀಳ್ಕೊಡಲಾಯಿತು.

ಈ ಎತ್ತು ತೆರಬಂಡಿ ಸ್ಪರ್ಧೆಯ 'ರಾಜಾಹುಲಿ' ಎಂದೇ ಖ್ಯಾತಿ ಪಡೆದಿದೆ. ರಾಮನಗೌಡರು ಕೊಲ್ಹಾರದಿಂದ 3 ವರ್ಷದ ಹಿಂದೆ ಈ ಎತ್ತನ್ನು 1 ಲಕ್ಷ ರೂ.ಗೆ ಖರೀದಿಸಿ ತೆರಬಂಡಿ ಸ್ಪರ್ಧೆಗೆ ಸಜ್ಜುಗೊಳಿಸಿದ್ದರು. ಸ್ಪರ್ಧೆ ನಡೆದಾಗೆಲ್ಲ ಈ ಎತ್ತಿಗೆ ಬಹುಮಾನ ಖಚಿತವಾಗಿತ್ತು. ರಾಜ್ಯದ ಜಾತ್ರೆಗಳಲ್ಲಿ ನಡೆಯುವ ಸ್ಪರ್ಧೆ ಸೇರಿದಂತೆ ಮಹಾರಾಷ್ಟ್ರದ ಉಮರಾಣಿ, ಜತ್ತ ಮತ್ತಿತರ ಕಡೆ ಈ ಎತ್ತು ಛಾಪು ಮೂಡಿಸಿದೆ.

ಈ ಎತ್ತು 3 ವರ್ಷದಲ್ಲಿ 20 ರಿಂದ 25 ತೆರಬಂಡಿ ಸ್ಪರ್ಧೆಯಲ್ಲಿ ಭಾಗವಹಿಸಿದೆ. 60 ಗ್ರಾಂ ಬಂಗಾರ, 2 ಬೈಕ್ ಮತ್ತು 10 ಲಕ್ಷ ರೂ.ಗೂ ಅಧಿಕ ಹಣವನ್ನು ಗೆದ್ದು ಮಾಲೀಕನಿಗೆ ಗಿಫ್ಟ್ ನೀಡಿದೆ.

**ಭರ್ಜರಿ ಆಹಾರ:** ಎತ್ತಿಗೆ ಗುಣಮಟ್ಟದ ಆಹಾರ, ಜತೆಗೆ ಡ್ರೈ ಫುಡ್‌ಗಳನ್ನು ನೀಡುತ್ತಿದ್ದರು. ಪ್ರತಿದಿನ ಮೈ ತೊಳೆದ ನಂತರ ಎರಡು ಹೊತ್ತು ಹಾಲು, ತತ್ತಿ, ಖಾರಿಕು, ಗೋಡಂಬಿ, ಬಾದಾಮಿ, ಎರಡು ಬಾರಿ ಜವೆ ಗೋಧಿ, ಗೋವಿನ ಜೋಳದ ಮುಸುರಿ, ಹಸಿ, ಒಣ ಮೇವು ತಿನ್ನಿಸುತ್ತಿದ್ದರು. ಆ ಮೂಲಕ ಸ್ಪರ್ಧೆಗೆ ರೆಡಿ ಮಾಡುತ್ತಿದ್ದರು. ಆಹಾರ ಕೊಡುವ ಮೊದಲು ಬೆಳಗ್ಗೆ ಭಾರವಾದ ಚಕ್ಕಡಿ ಕಟ್ಟಿ ತಾಲೀಮು ಮಾಡಿಸುತ್ತಿದ್ದರು. ಈಗ ಜೋಡೆತ್ತುಗಳಲ್ಲಿ ಒಂದನ್ನು ಮಾರಾಟ ಮಾಡಿದ್ದಾರೆ.


> ಈ ಎತ್ತು ನಮ್ಮ ಮನೆ ಮಗನೇ ಆಗಿತ್ತು. ರಾಜ್ಯದ ನಾನಾ ಭಾಗಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗೆದ್ದಿದೆ. ಖರೀದಿಸಿದವರ ಮನೆಯನ್ನು ಇದು ಬೆಳಗಲಿ.
>
> **-ದ್ಯಾವನಗೌಡ ರಾಮನಗೌಡ ಪಾಟೀಲ**
> ಎತ್ತಿನ ಮಾಲೀಕ, ಬಬಲಾದಿ.

02-07-2024
V-karantaka Pg 05

---

02-07-2024
V-karantaka Pg 04

# ಸೆಣಬಿಗೆ ಬೆಂಬಲ ಬೆಲೆ



**ಕೋಲ್ಕತಾ:** ಭಾರತೀಯ ಸೆಣಬು ನಿಗಮ (ಜೆಸಿಐ) 2024-25ನೇ ಋತುವಿನಲ್ಲಿ ಕಚ್ಚಾ ಸೆಣಬಿಗೆ ನೀಡುತ್ತಿದ್ದ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲ್‌ಗೆ 285 ರೂ. ಹೆಚ್ಚಿಸಿದೆ. ಇದರಿಂದ ಈಗ ಕ್ವಿಂಟಾಲ್ ಸೆಣಬಿನ ಬೆಲೆ 5,335 ರೂ. ಆಗಿದೆ. ಪ್ರಸಕ್ತ ಋತುವಿನಲ್ಲಿ (2023-24) ಸರಕಾರ 7.24 ಲಕ್ಷ ಬೇಲ್ ಕಚ್ಚಾ ಸೆಣಬಿನ ದಾಸ್ತಾನನ್ನು ಹೊಂದಿದೆ. ಬೆಂಬಲ ಬೆಲೆ ಹೆಚ್ಚಳದಿಂದ 1.70 ಲಕ್ಷ ರೈತರಿಗೆ ಅನುಕೂಲವಾಗುತ್ತದೆ.

'ಪೇಂಟೆಡ್ ಲೇಡಿ' ಎಂಬ ಚಿಟ್ಟೆ ಅಟ್ಲಾಂಟಿಕ್ ಸಾಗರದ ಮೇಲೆ 4 ಸಾವಿರ ಕಿ.ಮೀ. ಕ್ರಮಿಸುತ್ತದೆ!

# ಹಕ್ಕಿ ಹಾರುತಿದೆ ನೋಡಿದಿರಾ?

ಟೆಕ್ ನೋಟ
ಟಿ. ಜಿ. ಶ್ರೀನಿಧಿ



ದ. ರಾ. ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ?', ಯಾರ ಅಂಕೆಗೂ ಸಿಕ್ಕದೆ ಓಡುವ ಕಾಲವನ್ನು ಪಕ್ಷಿಗೆ ಹೋಲಿಸಿರುವ ಸೊಗಸಾದ ಕವನ. ಕಾಲದ ಹಕ್ಕಿ ಅತ್ಯಂತ ವೇಗವಾಗಿ ಗಾವುದ ಗಾವುದ ಗಾವುದ ಮುಂದಕೆ ಹಾರುತ್ತದೆ ಎಂದು ಬೇಂದ್ರೆಯವರು ಈ ಕವನದಲ್ಲಿ ಹೇಳಿದ್ದಾರೆ.

ಗಾವುದ ಎನ್ನುವುದು ದೂರವನ್ನು ಅಳೆಯುವ ಒಂದು ಪ್ರಮಾಣ. ಒಂದು ಗಾವುದವೆಂದರೆ ಎಷ್ಟು? ಬೇರೆಬೇರೆ ಆಕರಗಳಲ್ಲಿ ಹತ್ತರಿಂದ ಇಪ್ಪತ್ತು ಕಿ.ಮೀ. ನಡುವಿನ ಬೇರೆಬೇರೆ ಉತ್ತರಗಳು ಸಿಗುತ್ತವೆ. ಆ ಪೈಕಿ ಯಾವುದನ್ನೇ ಒಪ್ಪಿಕೊಂಡರೂ ಗಾವುದ ಗಾವುದ ಗಾವುದ ಮುಂದಕೆ ಹಾರುವ ಹಕ್ಕಿ ಸಾಕಷ್ಟು ದೂರವನ್ನೇ ಕ್ರಮಿಸಬೇಕು. ಬೇಂದ್ರೆಯವರ ಕವನದ ಹಕ್ಕಿಯ ಹಾಗೆಯೇ ಅಷ್ಟೆಲ್ಲ ದೂರ ಕ್ರಮಿಸುವ ಬೇರೆ ಹಕ್ಕಿಗಳೂ ಜೀವಜಗತ್ತಿನಲ್ಲಿವೆ.

ನಂಜನಗೂಡು ತಾಲೂಕಿನ 'ಹದಿನಾರು' ಎಂಬ ಗ್ರಾಮ ಮೈಸೂರು ಸಂಸ್ಥಾನದ ಮೂಲಸ್ಥಾನ ಎನ್ನುವುದು ಪ್ರತೀತಿ. ಅಲ್ಲಿನ ಕೆರೆಗೆ ಪಟ್ಟೆತಲೆ ಹೆಬ್ಬಾತುಗಳು (Bar-headed geese) ಪ್ರತಿವರ್ಷವೂ ಮಂಗೋಲಿಯ ದೇಶದಿಂದ ನೂರಾರು ಗಾವುದ ಹಾರಿಕೊಂಡು ಬರುತ್ತವೆ.

ಈ ಹಕ್ಕಿಗಳು ಮಂಗೋಲಿಯದಿಂದಲೇ ಬರುತ್ತವೆ ಎಂದವರು ಯಾರು? ವಲಸೆ ಹಕ್ಕಿಗಳ ವಿಷಯದಲ್ಲಿ ಇಂಥದ್ದೊಂದು ಸಂಶಯ ಸಹಜವೇ. ಪಕ್ಷಿಧಾಮವೊಂದಕ್ಕೆ ಹೋಗಿದ್ದಾಗ, ಅಲ್ಲಿಗೆ ಪಕ್ಷಿಗಳು ಎಲ್ಲಿಂದ ಬರುತ್ತವೆ ಎಂಬ ಪ್ರಶ್ನೆಗೆ ಉತ್ತರವಾಗಿ ನಮ್ಮ ಮಾರ್ಗದರ್ಶಕರು ತಮಗೆ ತಿಳಿದ ದೇಶಗಳ ಹೆಸರನ್ನೆಲ್ಲ ಹೇಳಿಬಿಟ್ಟಿದ್ದರು- H2O ಸಿನಿಮಾದಲ್ಲಿ ಉಪೇಂದ್ರ ಹೇಳುವ ಹಾಡಿನ ಹಾಗೆ!

ಹೀಗೆಲ್ಲ ಸಂಶಯ ಬರಬಾರದು ಎಂದೇ ವಿಜ್ಞಾನಿಗಳು ಪಕ್ಷಿಗಳ ವಲಸೆಯನ್ನು ಬಹಳ ವಿವರವಾಗಿ ಅಧ್ಯಯನ ಮಾಡುತ್ತಾರೆ, ತಮ್ಮ ಅಧ್ಯಯನಕ್ಕಾಗಿ ಹಲವು ತಂತ್ರಗಳನ್ನೂ ಬಳಸುತ್ತಾರೆ. ಈ ಪೈಕಿ ಹಕ್ಕಿಗಳ ಕಾಲಿಗೆ ಗುರುತಿನ ಬಳೆ ತೊಡಿಸುವುದು ಅತ್ಯಂತ ಹಳೆಯ ತಂತ್ರಗಳಲ್ಲೊಂದು. ಒಮ್ಮೆ ಬಳೆ ತೊಡಿಸಿಕೊಂಡ ಹಕ್ಕಿ ಇನ್ನೊಮ್ಮೆ ಇನ್ನೊಬ್ಬರಿಗೆ ಸಿಕ್ಕಿದರೆ, ಆ ಹಕ್ಕಿಯ ಪಯಣದ ಬಗ್ಗೆ, ಅದರ ಬದುಕಿನ ಬಗ್ಗೆ ಹೆಚ್ಚಿನ ಮಾಹಿತಿಯೂ ಸಿಗುತ್ತದೆ ಎನ್ನುವುದು ಇದರ ಉದ್ದೇಶ. ಇದು ಅಷ್ಟೇನೂ ಸಮರ್ಥವಲ್ಲ ಎನ್ನುವ ಕಾರಣದಿಂದ ಗುರುತಿನ ಬಳೆಗಳಲ್ಲಿ ವಿವಿಧ ತಂತ್ರಜ್ಞಾನಗಳನ್ನು ಬಳಸುವ ಅಭ್ಯಾಸ ರೂಢಿಗೆ ಬಂತು. ಹಕ್ಕಿ ಎಲ್ಲಿದೆ ಎನ್ನುವ ಬಗ್ಗೆ ಆ ಬಳೆಗಳು ರೇಡಿಯೊ ಸಂಕೇತದ ರೂಪದಲ್ಲಿ ಮಾಹಿತಿ ಕಳಿಸುವುದು, ಅದನ್ನು ಹಿಂಬಾಲಿಸುವ ಸಂಶೋಧಕರು ಆ ಮಾಹಿತಿಯನ್ನು ಪಡೆದುಕೊಂಡು ವಿಶ್ಲೇಷಿಸುವುದು (ರೇಡಿಯೊ ಟೆಲಿಮೆಟ್ರಿ) ಕೊಂಚಸಮಯ ನಡೆಯಿತು. ಎಲ್ಲ ಹಕ್ಕಿಗಳನ್ನೂ ಎಲ್ಲಕಡೆಯೂ ಹಿಂಬಾಲಿಸಲು ಸಾಧ್ಯವಿಲ್ಲದ ಕಾರಣ ಸಂಕೇತಗಳನ್ನು ಪಡೆದು ಒಡಿದಿಟ್ಟುಕೊಳ್ಳುವ ರಿಸೀವರುಗಳ ಜಾಲವನ್ನು ರೂಪಿಸಲಾಯಿತು. ಎಲ್ಲೆಡೆಯೂ ರಿಸೀವರುಗಳನ್ನು ಇಡಲಾಗದೆಂದು ಆ ಸಂಕೇತಗಳನ್ನು ಉಪಗ್ರಹಗಳ ಮೂಲಕ ಪಡೆದು ಬಳಸುವ ಅಭ್ಯಾಸ ಬಂತು!

ಹೀಗೆ, ವಲಸೆ ಹಕ್ಕಿಗಳು ಎಲ್ಲಿಂದ ಹೊರಡುತ್ತವೆ, ಎಲ್ಲಿಗೆ ಹೋಗುತ್ತವೆ ಎನ್ನುವುದನ್ನೆಲ್ಲ ಅಚ್ಚುಕಟ್ಟಾಗಿ ಪತ್ತೆಮಾಡುವುದು ಸಾಧ್ಯವಾಗಿದೆ.

ಇದೇ ರೀತಿ ಪ್ರಪಂಚದ ತುಂಬೆಲ್ಲ ಹಾರಾಡುವ ವಿಮಾನಗಳು ಎತ್ತ ಹೊರಟಿವೆ, ಈಗ ಎಲ್ಲಿವೆ ಎಂದು ತೋರಿಸುವ ವ್ಯವಸ್ಥೆಗಳೂ ಇವೆ. ಇಂದಿನ ಬಹುತೇಕ ವಿಮಾನಗಳು Automatic Dependent Surveillance-Broadcast (ADS-B) ಎಂಬ ತಂತ್ರಜ್ಞಾನ ಬಳಸಿ ತಾವೆಲ್ಲಿದ್ದೇವೆ ಎನ್ನುವ ಸಂಕೇತವನ್ನು ಕಳುಹಿಸುತ್ತಿರುತ್ತವೆ, ಬಳೆ ತೊಡಿಸಿಕೊಂಡ ಹಕ್ಕಿಯ ಹಾಗೆ! ಆ ಸಂಕೇತವನ್ನು ಪಡೆದು ಅರ್ಥೈಸುವ ವ್ಯವಸ್ಥೆಗಳು ಯಾವ ವಿಮಾನ ಎಲ್ಲಿದೆ ಎನ್ನುವ ಮಾಹಿತಿಯನ್ನು ಜಾಲತಾಣ ಹಾಗೂ ಮೊಬೈಲ್ ಆ್ಯಪ್‌ಗಳ ಮೂಲಕ ಎಲ್ಲರಿಗೂ ತಿಳಿಸುತ್ತವೆ. ವಿಮಾನಗಳು ಕಳಿಸುವ ಸಂದೇಶವನ್ನು ನೇರವಾಗಿ ಮಾತ್ರವಲ್ಲದೆ ಉಪಗ್ರಹಗಳ ಮೂಲಕ ಪಡೆದುಕೊಳ್ಳುವ ವ್ಯವಸ್ಥೆಯೂ ಇದೆ.




ಹಕ್ಕಿ ಆಯಿತು, ಲೋಹದ ಹಕ್ಕಿಯೂ ಆಯಿತು. ಇನ್ನೇನೆಲ್ಲ ಹಾರುತ್ತವೆ ಎಂದು ನೋಡುವುದಾದರೆ ಕ್ಷುದ್ರಗ್ರಹಗಳನ್ನೂ (Asteroid) ನೆನಪಿಸಿಕೊಳ್ಳಬಹುದು. ಮೊನ್ನೆಯಷ್ಟೇ (ಜೂ.30) ವಿಶ್ವ ಕ್ಷುದ್ರಗ್ರಹ ದಿನ ನಡೆದಿದ್ದು ನಿಮಗೆ ಗೊತ್ತಿರಬಹುದು: ಸೈಬೀರಿಯಾದ ತುಂಗುಸ್ಕಾ ನದಿಯ ಬಳಿ 1908ರಲ್ಲಿ ಕ್ಷುದ್ರಗ್ರಹವೊಂದು ಅಪ್ಪಳಿಸಿ 2 ಸಾವಿರ ಚ.ಕಿ.ಮೀ. ಪ್ರದೇಶವನ್ನು ಸರ್ವನಾಶಗೊಳಿಸಿದ ದಿನದ ನೆನಪಿನಲ್ಲಿ ಈ ದಿನಾಚರಣೆ ನಡೆಯುತ್ತದೆ.

ಕ್ಷುದ್ರಗ್ರಹಗಳೇನಾದರೂ ಭೂಮಿಗೆ ಬಡಿದರೆ, ಅವುಗಳ ಗಾತ್ರಕ್ಕೆ ಅನುಗುಣವಾದ ವಿನಾಶ ಕಟ್ಟಿಟ್ಟಬುತ್ತಿ. ಹಾಗಿರುವುದರಿಂದಲೇ, ಯಾವ ಕ್ಷುದ್ರಗ್ರಹ ಎಲ್ಲಿದೆ, ಯಾವ ದಿಕ್ಕಿನತ್ತ ಹೊರಟಿದೆ ಎಂದು ತಿಳಿದುಕೊಳ್ಳುವುದು ಮುಖ್ಯ. ಆದರೆ, ಹಕ್ಕಿಗಳು ಅಥವಾ ವಿಮಾನಗಳ ಜಾಡುಹಿಡಿಯಲು ಉಪಯೋಗಿಸುವ ತಂತ್ರಗಳನ್ನು ಇಲ್ಲಿ ಬಳಸುವಂತಿಲ್ಲ, ಹಾಗಾಗಿ, ವಿಶ್ವದೆಲ್ಲೆಡೆ ಹರಡಿರುವ ಖಗೋಳ ವೀಕ್ಷಣಾಲಯಗಳು ಕ್ಷುದ್ರಗ್ರಹಗಳ ಬಗ್ಗೆ ಇಲ್ಲಿಂದಲೇ ಮಾಹಿತಿ ಕಲೆಹಾಕುವ ಕೆಲಸ ಮಾಡುತ್ತವೆ. ಆ ಮೂಲಕ ಕ್ಷುದ್ರಗ್ರಹಗಳ ಕಕ್ಷೆ, ಗಾತ್ರ ಮುಂತಾದವನ್ನೆಲ್ಲ ತಿಳಿದುಕೊಳ್ಳುವ ವಿಜ್ಞಾನಿಗಳು, ಅವುಗಳಿಂದ ಭೂಮಿಗೆ ಏನಾದರೂ ಅಪಾಯವಿದೆಯೇ ಎಂದು ಲೆಕ್ಕಹಾಕುವ ಕೆಲಸ ಮಾಡುತ್ತಾರೆ. ಬಹುಪಾಲು ಕ್ಷುದ್ರಗ್ರಹಗಳು ನಮ್ಮ ತಂಟೆಗೆ ಬರುವುದಿಲ್ಲವಾದರೂ ಆಗೊಮ್ಮೆ ಈಗೊಮ್ಮೆ ಕೆಲವು ಭೂಮಿಯ ಹತ್ತಿರಕ್ಕೆ ಬಂದು ತಳಮಳ ಉಂಟುಮಾಡುತ್ತವೆ. ಅಣಕು ಕಾರ್ಯಾಚರಣೆಯ ಭಾಗವಾಗಿ ನಾಸಾ ಪ್ರಕಟಿಸಿದ ಮಾಹಿತಿಯನ್ನು ತಪ್ಪಾಗಿ ಅರ್ಥಮಾಡಿಕೊಂಡವರು 2038ರ ಜುಲೈ ತಿಂಗಳಲ್ಲಿ ಕ್ಷುದ್ರಗ್ರಹವೊಂದು ಭೂಮಿಗೆ ಬಡಿಯಲಿದೆ ಎಂದು ಗುಲ್ಲೆಬ್ಬಿಸಿದ ಘಟನೆ ಇತ್ತೀಚೆಗಷ್ಟೇ ನಡೆದಿತ್ತು.

ತಳಮಳ ಆಯಿತು ಎನ್ನುವುದಕ್ಕೆ ಹೊಟ್ಟೆಯಲ್ಲಿ ಚಿಟ್ಟೆ ಹಾರಾಡಿತು (butterflies in the stomach) ಎಂದೂ ಹೇಳುವುದುಂಟು. ಆ ಚಿಟ್ಟೆಯೊಂದನ್ನು ಬಿಟ್ಟಂತೆ, ಉಳಿದ ಚಿಟ್ಟೆಗಳು ಬಹಳ ಆಕರ್ಷಕ ಕೀಟಗಳು. ಜೀವಿತಾವಧಿ ಬಹಳ ಕಡಿಮೆಯಾದರೂ ಪರಿಸರ ವ್ಯವಸ್ಥೆಗೆ ಮಹತ್ವದ ಕೊಡುಗೆ ನೀಡುವುದು ಚಿಟ್ಟೆಗಳ ಹೆಚ್ಚುಗಾರಿಕೆ. ಹಕ್ಕಿಗಳ ಹಾಗೆ ಚಿಟ್ಟೆಗಳೂ ವಲಸೆಹೋಗುತ್ತವೆ ಎನ್ನುವುದು ವಿಶೇಷ.

ಚಿಟ್ಟೆಗಳು ಚುರುಕಾಗಿ ಹಾರಾಡುವುದನ್ನು ನಾವು ನೋಡಿದ್ದೇವೆ. ಅಷ್ಟೆಲ್ಲ ಸೊಗಸಾಗಿ ಹಾರುವ ಚಿಟ್ಟೆಗಳು ವಲಸೆಯೂ ಹೋಗಬಹುದು. ಅದರಲ್ಲೇನು ವಿಶೇಷ ಎನ್ನಬೇಡಿ. ವಿಶೇಷ ಇದೆ. ಬೇಕೆಂದಾಗ ನೆಲದ ಮೇಲೆ ವಿಶ್ರಾಂತಿ ತೆಗೆದುಕೊಂಡು ಪ್ರಯಾಣಿಸುವುದಷ್ಟೇ ಅಲ್ಲ, ಇಳಿಯಲು - ವಿಶ್ರಮಿಸಲು ಜಾಗವೇ ಇಲ್ಲದ ಸಮುದ್ರಗಳನ್ನೂ ಚಿಟ್ಟೆಗಳು ದಾಟುತ್ತವೆ ಎಂಬ ವಿಷಯವನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. 'Painted lady' ಎಂಬ ಹೆಸರಿನ ಚಿಟ್ಟೆಗಳು ಅಟ್ಲಾಂಟಿಕ್ ಸಾಗರದ ಮೇಲೆ 4 ಸಾವಿರ ಕಿ.ಮೀ.ಗಳಿಗೂ ಹೆಚ್ಚಿನ ದೂರ ಕ್ರಮಿಸಿರುವುದು ಸ್ಪೇನ್ ದೇಶದ ವಿಜ್ಞಾನಿಗಳ ಅಧ್ಯಯನದಿಂದ ತಿಳಿದುಬಂದಿದೆ.

ಚಿಟ್ಟೆಗಳ ಹಾರಾಟದ ಜಾಡನ್ನು ಅವರು ಪತ್ತೆಮಾಡಿದ್ದು ಹೇಗೆ? ಹಕ್ಕಿಗೆ ಮಾಡಿದಂತೆ ಚಿಟ್ಟೆಗೇನು ಗುರುತಿನ ಬಳೆ ತೊಡಿಸಲು ಸಾಧ್ಯವೇ? ಅದು ಸಾಧ್ಯವಿಲ್ಲವೆಂದೇ ವಿಜ್ಞಾನಿಗಳು ಹೊಸ ವಿಧಾನಗಳನ್ನು ಹುಡುಕಿದ್ದಾರೆ. ಅವುಗಳ ದೇಹಕ್ಕೆ ಅಂಟಿದ ಪರಾಗದ ಕಣಗಳನ್ನು ವಿಶ್ಲೇಷಿಸಿ, ಅದು ಯಾವ ಗಿಡದ್ದು- ಆ ಗಿಡ ಎಲ್ಲಿ, ಯಾವಾಗ ಬೆಳೆಯುತ್ತದೆ ಎನ್ನುವುದನ್ನು ಅವರು ಪತ್ತೆಮಾಡಿದ್ದಾರೆ. ಇದರ ಜತೆಗೆ ಆ ಚಿಟ್ಟೆಗಳ ವಂಶವಾಹಿ ರೂಪವನ್ನೂ (ಜಿನೋಮ್) ಪರಿಶೀಲಿಸಿ ಅವು ಮೂಲತಃ ಎಲ್ಲಿಯ ಚಿಟ್ಟೆಗಳು ಎನ್ನುವುದನ್ನು ಕಂಡುಕೊಂಡಿದ್ದಾರೆ. ಇಷ್ಟೆಲ್ಲ ಮಾಡಿದ ನಂತರವೇ ಚಿಟ್ಟೆಗಳ ಸಮುದ್ರೋಲ್ಲಂಘನದ ಕತೆ ಪ್ರಕಟವಾಗಿದೆ!

ಅಲ್ಲಿಗೆ, ಚಿಟ್ಟೆಯಿಂದ ಕ್ಷುದ್ರಗ್ರಹದವರೆಗೆ ಯಾವುದು ಯಾವ ಸಮಯದಲ್ಲಿ ಏನು ಮಾಡುತ್ತಿದೆ, ಎಲ್ಲಿ ಹೋಗುತ್ತಿದೆ ಎಂದು ತಿಳಿದುಕೊಳ್ಳುವುದು ನಮಗೆ ಗೊತ್ತಿದೆ ಎಂದಾಯಿತು. ಮೊಬೈಲಿನಲ್ಲಿ ಬುಕ್ ಮಾಡಿದ ಆಟೊ ನಮ್ಮ ಮನೆಯ ಹತ್ತಿರ ಬಂದಿದ್ದನ್ನು ಅದೇ ಮೊಬೈಲಿನಲ್ಲಿ ನೋಡುವುದಷ್ಟೇ ಅಲ್ಲ, ಅಟ್ಲಾಂಟಿಕ್ ಸಾಗರದ ಮೇಲೆ ಚಿಟ್ಟೆ ರೆಕ್ಕೆ ಬಡಿದದ್ದನ್ನೂ ನಾವು ಪತ್ತೆಮಾಡಬಲ್ಲೆವು ಎಂದು ಬೇಕಾದರೆ ಜಂಬವನ್ನೂ ಕೊಚ್ಚಿಕೊಳ್ಳಬಹುದು. ಬೇಂದ್ರೆಯವರು ಕವನದಲ್ಲಿ ಹೇಳಿದ ಕಾಲದ ಹಕ್ಕಿ ಮಾತ್ರ ಅದೆಲ್ಲಿ ಹೋಗುತ್ತದೋ, ಅದನ್ನು ಪತ್ತೆಮಾಡುವುದು ಮಾತ್ರ ಇದುವರೆಗೂ ಯಾವ ತಂತ್ರಜ್ಞಾನಕ್ಕೂ ಸಾಧ್ಯವಾಗಿಲ್ಲ.

(ಲೇಖಕರು: ವಿಜ್ಞಾನ ಮತ್ತು ತಂತ್ರಜ್ಞಾನ ಬರಹಗಾರರು)

02-07-2024
V-karnataka Pg 08

---

● ವಾಣಿ ಮೈಸೂರು

# ಜೀವ ಸಂಜೀವಿನಿ ಕೊತ್ತಂಬರಿ

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೇ! ಇಷ್ಟು ಚಿಕ್ಕ ಎಲೆಗಳು ರೋಗ ನಿವಾರಣೆಗೆ ಉಪಯೋಗವಾಗುತ್ತದೆ ಅಂದರೆ ತಿಳಿದುಕೊಳ್ಳಲು ಗಮನ ಹರಿಸಲೇಬೇಕು. ದಿನನಿತ್ಯ ಮಾಡುವ ಅಡುಗೆ ತಿಂಡಿಗಳಲ್ಲಿ ಕೊತ್ತಂಬರಿ ಸೊಪ್ಪನ್ನು ಉಪಯೋಗಿಸುತ್ತೇವೆ ಮತ್ತು ತಿಂಡಿಗಳಿಗೆ ಅಲಂಕಾರಿಕವಾಗಿಯು ಕಾಣಲು ಹಾಗೂ ಸುವಾಸನೆಗೆ ಕೊತ್ತಂಬರಿ ಸೊಪ್ಪನ್ನು ಬಳಸಲಾಗುತ್ತದೆ. 5000 ವರ್ಷದಷ್ಟು ಹಿಂದೆ ಪರಿಚಿತವಾದ ಹಳೆಯ ಗಿಡಮೂಲಿಕೆಯಾಗಿದ್ದು ಇಟಲಿಯಲ್ಲಿ ಹುಟ್ಟಿಕೊಂಡಿದೆ.

**ಆರೋಗ್ಯಕ್ಕೆ ಕೊತ್ತಂಬರಿ ಉಪಯೋಗಗಳು**

ಕೊತ್ತಂಬರಿ ಸೊಪ್ಪಿನಲ್ಲಿ ವಿಟಮಿನ್ ಸಿ, ವಿಟಮಿನ್ ಇ ಮತ್ತು ವಿಟಮಿನ್ ಎ ಅಂಶಗಳು ಒಳಗೊಂಡಿದ್ದು ಪ್ರತಿ ರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಜತೆಗೆ ಕಬ್ಬಿಣ ಹೀರಿಕೊಳ್ಳಲು ಉಪಯೋಗಕಾರಿಯಾಗಿದೆ.

- ಕಿಣ್ವದ ಚಟುವಟಿಕೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಇನ್ಸುಲಿನ್ ಸ್ರವಿಸುವಿಕೆಯನ್ನು ಉತ್ತೇಜಿಸುತ್ತದೆ.
- ಕೊತ್ತಂಬರಿಯಲ್ಲಿ ವಿಟಮಿನ್ ಸಿ ಇರುವುದರಿಂದ ಬಿಳಿ ರಕ್ತಕಣಗಳು ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ.
- ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡುತ್ತದೆ.
- ಅಧಿಕ ರಕ್ತದ ಸಕ್ಕರೆ ಖಾಯಿಲೆಯಿಂದ ಬಳಲುತ್ತಿರುವವರು ಕೊತ್ತಂಬರಿ ಸೊಪ್ಪಿನ ನೀರನ್ನು ಕುಡಿಯುವುದರಿಂದ ಅಧಿಕ ರಕ್ತದ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಪ್ರಯೋಜನಕಾರಿಯಾಗಿದೆ.
- ಕೊಲೆಸ್ಟ್ರಾಲ್‌ನ್ನು ಕಡಿಮೆ ಮಾಡಲು ಮತ್ತು ಕೊಲೆಸ್ಟ್ರಾಲ್‌ನ್ನು ಸುಧಾರಿಸಲು ಉಪಯೋಗಕಾರಿಯಾಗಿದೆ.
- ಕೊತ್ತಂಬರಿಯ ಸೇವನೆಯಿಂದ ಫೈಬರ್, ಕಬ್ಬಿಣ, ಮ್ಯಾಂಗನೀಸ್, ಕ್ಯಾಲ್ಸಿಯಂ ವಿಟಮಿನ್ ಕೆ ಹಾಗೂ ರಂಜಕ ಮುಂತಾದ ಪೋಷಕಾಂಶಗಳು ಸಿಗುತ್ತದೆ.
- ವಿಟಮಿನ್ ಎ, ವಿಟಮಿನ್ ಸಿ, ವಿಟಮಿನ್ ಇ ಮತ್ತು ಕ್ಯಾರೊಟಿನಾಯ್ಡ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಉತ್ತಮ ದೃಷ್ಟಿಯನ್ನು ಉತ್ತೇಜಿಸಲು ಸಹಕಾರಿಯಾಗಿದೆ.



- ಕೊತ್ತಂಬರಿ ಸೊಪ್ಪಿನಲ್ಲಿ ನಾರಿನಾಂಶ ಪ್ರಮಾಣವಿದ್ದು ಇದು ಉತ್ತಮ ಜೀರ್ಣಕ್ರಿಯೆಗೆ ಸಹಕಾರಿಯಾಗುತ್ತದೆ ಮತ್ತು ಜೀರ್ಣಕ್ರಿಯ ಸಮಸ್ಯೆಗಳಿಗೆ ಪರಿಹಾರವಾಗಿದೆ.
- ಅಧ್ಯಯನಗಳ ಪ್ರಕಾರ ಕೊತ್ತಂಬರಿ ಸಾರವು ಮೆದುಳಿನಲ್ಲಿರುವ ಜೀವಕೋಶಗಳ ಹಾನಿಯಿಂದ ಕಾಪಾಡುತ್ತದೆ
- ಕೊತ್ತಂಬರಿ ರೋಗ ನಿವಾರಕ ಗುಣಲಕ್ಷಣಗಳನ್ನು ಹೊಂದಿದೆ. ಇದು ಸಸ್ಯ ಸಂಯುಕ್ತಗಳ ಆಹಾರದಿಂದ ಹರಡುವ ಸಮಸ್ಯೆಗಳು ಮತ್ತು ಸೋಂಕುಗಳ ವಿರುದ್ಧ ಪ್ರಯೋಜನಕಾರಿಯಾಗಿದೆ.
- ಕೊತ್ತಂಬರಿಯ ದೈನಂದಿನ ಸೇವನೆಯು ವಯಸ್ಸಿಗೆ ಸಂಬಂಧಿಸಿದ ಮ್ಯಾಕ್ಯುಲರ್ ಡಿ ಜನರೇಶನ್‌ನ್ನು ವಿಳಂಬಗೊಳಿಸುತ್ತದೆ.
- ಸಂಧಿವಾತಕ್ಕೆ ಸಂಬಂಧಿಸಿದ ನೋವಿನ ನಿವಾರಣೆಗೂ ಕೊತ್ತಂಬರಿ ಸಹಾಯಕಾರಿಯಾಗಿದೆ
- ಸೋಡಿಯಂ ಸೇವನೆಯನ್ನು ಕಡಿಮೆ ಮಾಡಲು ಉಪಯುಕ್ತವಾಗಿದೆ.
- ಆತಂಕ ವಿರೋಧಿ ಮತ್ತು ನಿದ್ರೆ ಪ್ರಚೋದಿಸುವ ಅಂಶಗಳು ಕೊತ್ತಂಬರಿ ಸೊಪ್ಪಿನಲ್ಲಿರುವ ಸಂಯುಕ್ತಗಳಲ್ಲಿ ಇದೆ.
- ಕೊತ್ತಂಬರಿ ಬೀಜಗಳು ಸಹ ಮೂತ್ರದ ಸೋಂಕಿನ ವಿರುದ್ಧ ಹೋರಾಡುತ್ತದೆ ಮತ್ತು ರಕ್ಷಣೆಯನ್ನು ಒದಗಿಸುತ್ತದೆ.

02-07-2024
Viswavani Pg 05